ವಾಮಾಚಾರ, ಮಾಟ ಅಥವಾ ಮತ್ತೆಂಥದೋ ಮಾಡಿಸಿರಬಹುದೇ? ನಿಜಕ್ಕೂ ಅಂಥವೆಲ್ಲಾ ನಡೆಯುತ್ತವೆಯೇ? ಇಲ್ಲ ಎನ್ನುವುದೂ ಸಾಧ್ಯವಿರಲಿಲ್ಲ. ಅರ್ಧಗಂಟೆಯ ಕೆಳಗೆ ಚೆಟ್ಟದಂತಿದ್ದ ಮನುಷ್ಯ ಹಠಾತ್ತನೆ ಸಾವಿನ ಹಿಂಬಾಗಿಲು ತಟ್ಟುವಷ್ಟು ಅನಾರೋಗ್ಯಕ್ಕೀಡಾಗುತ್ತಾನೆಂದರೆ ಯಾರಿಗೆ ಗೊತ್ತು?

ಎಷ್ಟೇ ಯೋಚಿಸಿದರೂ ಗೊಂದಲಗಳು ಬಗೆಹರಿಯುತ್ತಿರಲಿಲ್ಲ. ಯಾವ ತರ್ಕಕ್ಕೂ ಬದುಕಿನ ಈ ಕ್ಷಣದ ಪ್ರಶ್ನೆಗಳನ್ನು ಭೇದಿಸುವ ಶಕ್ತಿಯಿರಲಿಲ್ಲ. ಆದರೂ ತೀರಾ ಎಲ್ಲೋ ಕುಳಿತು, ಇನ್ನೆಲ್ಲೋ ಇರುವ ಯಾರನ್ನೋ ಮೃತ್ಯುಕೂಪಕ್ಕೆ ತಳ್ಳುವ ವಿದ್ಯೆಗಳಿವೆಯೆಂದು ನಂಬಲಿಕ್ಕೆ ನನ್ನ ವಿವೇಕ ಬಿಡಲಿಲ್ಲ. ಆದರೆ, ಈ ಕ್ಷಣಕ್ಕೆ ಅದನ್ನು ಇವಳಿಗೆ ತಿಳಿಸಿ ಹೇಳುವುದು ಹೇಗೆಂದು ತಿಳಿಯದೇ, ''ಸರಿ ಮಂದಾ. ಅವರ ಮೇಲೊಂದು ಕಣ್ಣಿಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ'' ಎಂದಷ್ಟೇ ಹೇಳಿ ಅಲ್ಲಿಂದ ಹೊರಟೆ.

★★★

ತಾಯಿಯ ಆಗಮನ ಹಾಗೂ ಅಪ್ಪನ ಡಿಸ್‌ಚಾರ್ಜ್ ಎನ್ನುವ ಎರಡೂ ಸಮಾಧಾನದ ಅಂಶಗಳೊಂದಿಗೆ ಮಂದಾರ ಮನೆಗೆ ತೆರಳಿದಳು. ಮುಂದಿನ ಒಂದು ವಾರದ ತನಕ ಅವಳ ಮನೆಗೆ ಹೋಗಿ ಬಂದು ಮಾಡುತ್ತಿದ್ದ ನಾನು, ಬಳಿಕ ಲಾಕ್‌ಡೌನಿನಿಂದಾಗಿ ಮುಚ್ಚಿದ್ದ ಬೆಂಗಳೂರಿನ ಆಫೀಸು ಪುನರಾರಂಭವಾಗಿದ್ದರಿಂದ ಅಲ್ಲಿಗೆ ಮರಳಿದೆ. ಮುಂದಿನ ಎರಡುತಿಂಗಳ ತನಕ, ಹುಷಾರಾಗ್ತಿದಾರೆ, ಪರವಾಗಿಲ್ಲ, ಏಳಲಿಕ್ಕೆ ನೋಡ್ತಿದ್ದಾರೆ, ಒಂದೊಂದಕ್ಷರ ಪಿಸುಗುಡ್ತಿದ್ದಾರೆ ಎಂಬ, ಫೋನು ತಿಳಿಸಿದ ಸುದ್ದಿಗಳ ಹೊರತಾಗಿ ಮತ್ತೇನನ್ನೂ ನಾನು ನೋಡಲಾಗಲಿಲ್ಲ. ಮಂದಾ ಸಹ ಅಪ್ಪನ ಶುಶ್ರೂಷೆಯ ಭರದಲ್ಲಿ ಅಂದು ಹೇಳಿದ್ದ ಮಾತದ ವಿಷಯವನ್ನು ಮರೆತೇ ಬಿಟ್ಟಿದ್ದಳು. ಹೀಗೆ ಪರಿಸ್ಥಿತಿ ತಿಳಿಯಾಗತೊಡಗಿದ ಒಂದು ತಿಂಗಳ ಬಳಿಕ ಮನೆಗೆ ಹೋದವನು ನೇರ ಮಂದಾಳ ಮನೆಯತ್ತ ಹೊರಟೆ. ಮಾವನ ಕ್ಷೇಮ ಸಮಾಚಾರ, ಊಟ, ಕಾಫಿಗಳೆಲ್ಲ ಮುಗಿದು ಮೇಲೆ ಮಂದಾ ವಾಕಿಂಗ್‌ನ ನೆಪದಲ್ಲಿ ಊರ ಹೊರಗಿನ ಗುಡ್ಡದ ದೇವಾಲಯದತ್ತ ನನ್ನನ್ನ ಹೊರಡಿಸಿದಳು. ದೇವರಿಗೆ ನಮಿಸಿ, ಅಲ್ಲೇ ಹೊರಗಿದ್ದ ಕಲ್ಲುಬಂಡೆಯ ಮೇಲೆ ಕುಳಿತುಕೊಳ್ಳುವ ಹೊತ್ತಿಗೆ ಸೂರ್ಯ ತನ್ನ ಆರೋಹಣದ ಕೊನೆಯ ಮೆಟ್ಟಿಲಿನಲ್ಲಿದ್ದ.

''ಹಿಂದಿನ ಸಲ ಈ ಗುಡ್ಡಕ್ಕೆ ಬರುವಾಗ ಜೊತೆಗೆ ಮಾವನಿದ್ದ. ಆದರೆ, ಇವತ್ತು... ಇನ್ನೆಂದಿಗಾದರೂ ಅವನು ಈ ಗುಡ್ಡ ಏರಿಯಾನೇ? ಗುಡ್ಡ ಹಾಳಾಗಲಿ, ಮನೆಯ ಅಂಗಳಕ್ಕಾದರೂ ಇಳಿದಾನೇ? ಛೇ, ಈ ಬದುಕು ಎಷ್ಟೊಂದು ಅನಿಶ್ಚಿತ ಅಲ್ವಾ ಮಂದಾ? ಇವತ್ತು ನಾನು, ನೀನು ಇಲ್ಲಿ ತನಕ ನಡೆದು ಬಂದಿದ್ದೇವೆ ಅಂದರೆ ಅದು ಈ ಹೊತ್ತಿಗಷ್ಟೇ ಸತ್ಯ. ನಾಳೆ ಈ ಹೊತ್ತಿಗೆ ಎಲ್ಲಿ, ಯಾವ ಸ್ಥಿತಿಯಲ್ಲಿರುತ್ತೇವೋ ಯಾರೂ ಹೇಳಲಾಗುವುದಿಲ್ಲ. ಕಣ್ತಪ್ಪೋ, ಮೋಸವೋ, ಮಾಟವೋ... ಒಟ್ಟಾರೆ ಯಾವುದೋ ಒಂದು ಮಾವನನ್ನು ಮೂಲೆಗೆ ಕೂರಿಸಿಯೇ ಬಿಟ್ಟಿತು.''

ಗಾಳಿಗೆ ಇನ್ನೇನು ಬಿದ್ದೇ ಹೋದವೆಂಬಂತೆ ವಾಲುತ್ತಿದ್ದ ತೆಂಗಿನ ಮರಗಳತ್ತ ನೋಡುತ್ತಾ ಗಾಢ ವಿಷಾದದಲ್ಲಿ ಹಾಗೆಂದೆ.

''ಅದಕ್ಕೆ ಕಾರಣ ಬೇರೆ ಯಾರೂ ಅಲ್ಲ, ಅಪ್ಪನೇ!''

ಏರಿಳಿತಗಳಿಲ್ಲದ ಸ್ವರದಲ್ಲಿ ಮಂದಾ ಹಾಗೆಂದಾಗ ನಾನು ಬೆಚ್ಚಿಬಿದ್ದು ಅವಳತ್ತ ನೋಡಿದೆ. ಅವಳ ಕಣ್ಣಿನಲ್ಲಿ ಭಾವಗಳೇ ಇರಲಿಲ್ಲ.

''ಹೌದು ಶರತ್. ನಾನು, ನೀನು ನೋಡದ ವ್ಯಕ್ತಿಯೊಬ್ಬ ಅಪ್ಪನೊಳಗಿದ್ದ. ಒಬ್ಬ ಅಮ್ಮ ಮಾತ್ರ ಅವನನ್ನು ನೋಡಿದ್ದಳು ಹಾಗೂ ಸಹಿಸಿಕೊಂಡಿದ್ದಳು. ಅಪ್ಪನ ಈ ಸ್ಥಿತಿಗೆ ಕಾರಣ ಅವನೊಳಗಿನ ಆ ವ್ಯಕ್ತಿಯೇ!''